# ಕ್ರಿಕೆಟ್ ಭವಿಷ್ಯಕ್ಕೆ ಮಾರಕ

ಇಂಗ್ಲೆಂಡ್– ಪಾಕಿಸ್ತಾನ ನಡುವೆ ಇತ್ತೀಚೆಗೆ ನಡೆದ ಕ್ರಿಕೆಟ್ ಟೆಸ್ಟ್ ಪಂದ್ಯಗಳಲ್ಲಿ ಪಾಕ್ ಆಟಗಾರರು ಮೋಸದ ಆಟ ಆಡಿದರು ಎಂಬ ಸಂಗತಿ ವಿಶ್ವದ ಕ್ರಿಕೆಟ್ ಪ್ರೇಮಿಗಳನ್ನು ಘಾಸಿಗೊಳಿಸಿದೆ. ಮೋಸದಾಟದ ರೂವಾರಿಯಾದ ಬುಕ್ಕಿ ಹಾಗೂ ಕೆಲ ಪಾಕ್ ಆಟಗಾರರ ನಡುವೆ ಆದ ಒಪ್ಪಂದಗಳ ಬಗ್ಗೆ ಪೊಲೀಸರ ವಿಚಾರಣೆ ಸಂದರ್ಭದಲ್ಲಿ ಹೊರಬಿದ್ದಿರುವ ಮಾಹಿತಿಗಳು ಆತಂಕ ಹುಟ್ಟಿಸುತ್ತವೆ. ಪಾಕ್ ತಂಡದ ಕೆಲ ಆಟಗಾರರ ಕೊಠಡಿಯಲ್ಲಿ ಸಿಕ್ಕ ಅಪಾರ ಹಣವನ್ನು ಸ್ಕಾಟ್ಲೆಂಡ್‌ಯಾರ್ಡ್ ಪೊಲೀಸರು ವಶಪಡಿಸಿಕೊಂಡಿದ್ದೂ ಸೇರಿದಂತೆ ಕಳ್ಳಾಟಗಳೆಲ್ಲ ಒಂದೊಂದಾಗಿ ಬೆಳಕಿಗೆ ಬರುತ್ತಿದ್ದಂತೆ ಆಟಗಾರರ ಅಸಲಿ ಬಣ್ಣ ಬಯಲಾಗಿದೆ.

ಅಂತರರಾಷ್ಟ್ರೀಯ ಕ್ರಿಕೆಟ್‌ನಲ್ಲಿ ಈಗ ಹಣವೇ ಮುಖ್ಯವಾಗಿ ಆಟ ಹಿಂದೆ ಸರಿಯುತ್ತಿದೆ. ಇದು ದುರದೃಷ್ಟಕರ ಮಾತ್ರವಲ್ಲ, ನಾಚಿಕೆಗೇಡಿನ ಸಂಗತಿ. ಮೋಸದಾಟದ ಆರೋಪ ಎದುರಿಸುತ್ತಿರುವ ಪಾಕ್ ಆಟಗಾರರು ಕ್ರಿಕೆಟ್ಟಿನ ಹಾಗೂ ತಮ್ಮ ದೇಶದ ಗೌರವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಹರಾಜು ಹಾಕಿದ್ದಾರೆ. ಒಂದು ಕಾಲದಲ್ಲಿ ಪಾಕಿಸ್ತಾನ ತಂಡ ಜಗತ್ತಿನ ಪ್ರಬಲ ತಂಡವಾಗಿತ್ತು. ಈಗ ಮೋಸದಾಟದಿಂದಾಗಿ ಕುಖ್ಯಾತಿ ಪಡೆಯುತ್ತಿದೆ. ಪಾಕಿಸ್ತಾನದ ಆಟಗಾರರಷ್ಟೇ ಅಲ್ಲ. ಕ್ರಿಕೆಟ್ ಆಡುವ ಎಲ್ಲಾ ರಾಷ್ಟ್ರಗಳ ತಂಡಗಳಲ್ಲೂ ಮೋಸದಾಟ ಆಡುವವರು ಇರಬಹುದಾದ ಸಾಧ್ಯತೆಗಳನ್ನು ತಳ್ಳಿ ಹಾಕಲಾಗದು. ಬೆಟ್ಟಿಂಗ್, ಮ್ಯಾಚ್ ಫಿಕ್ಸಿಂಗ್ ಇತ್ಯಾದಿಗಳ ಜತೆಗೆ ಸ್ಪಾಟ್ ಫಿಕ್ಸಿಂಗ್ ಎಂಬ ಹೊಸ ವರಸೆ ಮೋಸದಾಟದ ವ್ಯಾಪ್ತಿಯನ್ನು ವಿಸ್ತರಿಸಿದೆ. ಈ ಬೆಳವಣಿಗೆ ಕ್ರಿಕೆಟ್ ಭವಿಷ್ಯಕ್ಕೆ ಮಾರಕವಾಗಿದೆ. ಅನಾಯಾಸವಾಗಿ ಹಣ ಗಳಿಸುವ ಅವಕಾಶ ಇರುವ ಕಡೆಗಳಲ್ಲಿ ಮೋಸ, ವಂಚನೆಗಳು ತಲೆ ಎತ್ತುತ್ತಲೇ ಇರುತ್ತವೆ ಎನ್ನುವುದು ಮತ್ತೊಮ್ಮೆ ಸಾಬೀತಾಗಿದೆ.

ಕ್ರಿಕೆಟ್ ಆಟಗಾರರೆಂದರೆ ನಮ್ಮ ಯುವಜನರಿಗೆ ಎಲ್ಲಿಲ್ಲದ ಅಭಿಮಾನ. ಕ್ರಿಕೆಟ್ ಆಟಗಾರರೇ ಅವರ ಹೀರೊಗಳು, ಬದುಕಿನ ಮಾದರಿಗಳು. ಭಾರತ ಮಾತ್ರವಲ್ಲ ಬಹುಶಃ ಕ್ರಿಕೆಟ್ ಆಡುವ ಎಲ್ಲ ದೇಶಗಳಲ್ಲೂ ಹೀಗೇ ಇದ್ದೀತು. ಕ್ರಿಕೆಟ್ ಆಟಗಾರರು ದೇಶದ ಗೌರವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯುತ್ತಾರೆ ಎಂಬ ಭಾವನೆ ಅನೇಕರಿಗೆ ಇದೆ. ಆದರೆ ಕೆಲವು ಆಟಗಾರರಿಗೆ ದೇಶಕ್ಕೆ, ಜನರಿಗೆ ಮೋಸ ಮಾಡುತ್ತಿದ್ದೇವೆ ಎಂಬ ಕನಿಷ್ಠ ಎಚ್ಚರವೂ ಇಲ್ಲ. ದೇಶದ ಗೌರವ ಮಣ್ಣು ಪಾಲಾದರೂ ಸರಿ, ನಮಗೆ ಹಣ ಸಿಕ್ಕರೆ ಸಾಕು ಎನ್ನುವಂತೆ ವರ್ತಿಸುತ್ತಿದ್ದಾರೆ.

ಭಾರತೀಯ ಕ್ರಿಕೆಟ್ ಆಟಗಾರರು ಹಣದ ವ್ಯಾಮೋಹಕ್ಕೆ ಬಲಿಯಾಗಿ ಬಹಳ ವರ್ಷಗಳೇ ಕಳೆದಿವೆ. ಈಗ ಪಾಕ್ ಆಟಗಾರರ ಸರದಿ. ಭವಿಷ್ಯದಲ್ಲಿ ಮೋಸದಾಟದ ಸಾಧ್ಯತೆಗಳನ್ನು ಹೇಗಿರಬಹುದು ಎಂದು ಯೋಚಿಸಿದರೆ ಕ್ರಿಕೆಟ್ ವ್ಯವಸ್ಥೆಯ ಬಗ್ಗೆ ಅಸಹ್ಯದ ಭಾವನೆಗಳು ಬೆಳೆಯುತ್ತವೆ. ಬುಕ್ಕಿಗಳೆಂಬ ಮಧ್ಯವರ್ತಿಗಳ ಕೈಗಳು ಬಹಳ ಉದ್ದ ಇವೆ. ಮೋಸದಾಟ ಶಿಕ್ಷಾರ್ಹ ಅಪರಾಧ ಅಲ್ಲ. ಹೀಗಾಗಿ ಯಾರಿಗೂ ಶಿಕ್ಷೆಯ ಭಯ ಇಲ್ಲ. ಮೋಸ ಸಾಬೀತಾದರೆ ಆ ಆಟಗಾರನನ್ನು ತಂಡದಿಂದ ಕೈಬಿಡುತ್ತಾರಷ್ಟೇ. ಅದು ಶಿಕ್ಷೆ ಅಲ್ಲವೇ ಅಲ್ಲ. ಮೋಸದಾಟ ಆಡುವುದೇ ಲಾಭದಾಯಕ ಅನ್ನಿಸಿದರೆ ನಿಜವಾದ ಆಟ ಆಡುವ ಅಗತ್ಯವೇ ಬೀಳುವುದಿಲ್ಲ. ಮೋಸದಾಟ ಆಡಿದ ಆರೋಪದ ಮೇಲೆ ಅಜರುದ್ದೀನ್ ಅವರನ್ನು ಭಾರತ ತಂಡದಿಂದ ಕೈಬಿಡಲಾಯಿತು. ಆದರೆ ಆದದ್ದೇನು? ಅವರೀಗ ಸಂಸತ್ ಸದಸ್ಯರು. ನಮ್ಮ ವ್ಯವಸ್ಥೆ ಇರುವುದೇ ಹೀಗೆ. ಮೋಸದ ಆಟ ಆಡಿದ ವ್ಯಕ್ತಿಗೆ ಜನರ ಬೆಂಬಲ ಸಿಕ್ಕಿ ಅವರ ಪ್ರತಿನಿಧಿಯಾಗುವ ಮುಕ್ತ ಅವಕಾಶವಿದೆ. ಇದು ತಪ್ಪಬೇಕು. ಮೋಸದಾಟ ಆಡಿದ ಕ್ರೀಡಾಪಟುವಿಗೆ ಶಿಕ್ಷೆ ವಿಧಿಸಲು ಸಾಧ್ಯವಾಗುವಂತೆ ಕಾನೂನು ರೂಪಿಸುವ ಅಗತ್ಯವಿದೆ.

ಈಗ ಕ್ರಿಕೆಟ್ ಬರೀ ಆಟವಷ್ಟೇ ಆಗಿ ಉಳಿದಿಲ್ಲ. ಅಲ್ಲಿ ಅಪಾರ ಹಣದ ಹರಿವು ಇದೆ. ಐಪಿಎಲ್ ಕ್ರಿಕೆಟ್ ಟೂರ್ನಿಯಲ್ಲಿ ನಡೆದ ಮೋಸ, ಅವ್ಯವಹಾರಗಳಲ್ಲಿ ಭಾಗಿಯಾದವರ ವಿರುದ್ಧ ಇನ್ನೂ ಕಾನೂನು ಕ್ರಮ ಜರುಗಿಸಲು ಸಾಧ್ಯವಾಗಿಲ್ಲ. ಕ್ರಿಕೆಟ್‌ನಲ್ಲಿ ಆಟಗಾರರಷ್ಟೇ ಇಲ್ಲ. ಕ್ರಿಕೆಟ್ ಮಂಡಳಿಗಳ ಪದಾಧಿಕಾರಿಗಳು, ರಾಜಕಾರಣಿಗಳು, ಭೂಗತ ಜಗತ್ತಿನ ಖದೀಮರು, ಬೆಟ್ಟಿಂಗ್ ಏಜೆಂಟರು, ಆಟಗಾರರ ಗೆಳತಿಯರು– ಹೀಗೆ ಅನೇಕರು ಸೇರಿಕೊಂಡು ಆಟದ ಮತ್ತು ಆಟಗಾರರ ಜಾಡು ತಪ್ಪಿಸುತ್ತಿದ್ದಾರೆ. ಇದಕ್ಕೆ ಕಡಿವಾಣ ಹಾಕಬೇಕು. ಆದರೆ ಅನಾಯಾಸವಾಗಿ ಹಣ ಮಾಡುವ ಮಾರ್ಗಗಳು ಮುಕ್ತವಾಗಿ ತೆರೆದಿರುವಾಗ ಮೋಸದ ಕೃತ್ಯಗಳನ್ನು ನಿಲ್ಲಿಸುವುದು ಸುಲಭವೂ ಅಲ್ಲ.

■ ಪ್ರೇಮಕುಮಾರ ಹರಿಯಬ್ಬೆ

**ಕ್ರಿಕೆಟ್ ಆಟಗಾರರೆಂದರೆ ನಮ್ಮ ಯುವಜನರಿಗೆ ಎಲ್ಲಿಲ್ಲದ ಅಭಿಮಾನ. ಕ್ರಿಕೆಟ್ ಆಟಗಾರರೇ ಅವರ ಹೀರೊಗಳು, ಬದುಕಿನ ಮಾದರಿಗಳು. ಭಾರತ ಮಾತ್ರವಲ್ಲ ಬಹುಶಃ ಕ್ರಿಕೆಟ್ ಆಡುವ ಎಲ್ಲ ದೇಶಗಳಲ್ಲೂ ಹೀಗೇ ಇದ್ದೀತು. ಕ್ರಿಕೆಟ್ ಆಟಗಾರರು ದೇಶದ ಗೌರವವನ್ನು ಅಂತರರಾಷ್ಟ್ರೀಯ ಮಟ್ಟದಲ್ಲಿ ಎತ್ತಿ ಹಿಡಿಯುತ್ತಾರೆ ಎಂಬ ಭಾವನೆ ಅನೇಕರಿಗೆ ಇದೆ. ಆದರೆ ಕೆಲವು ಆಟಗಾರರಿಗೆ ದೇಶಕ್ಕೆ, ಜನರಿಗೆ ಮೋಸ ಮಾಡುತ್ತಿದ್ದೇವೆ ಎಂಬ ಕನಿಷ್ಠ ಎಚ್ಚರವೂ ಇಲ್ಲ.**

